# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 18

# ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ಅಧಿನಿಯಮ 2001.

## ಪ್ರಕರಣಗಳ ಪಟ್ಟಿ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು
2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 20002001 ನೇ ಹಣಕಾಸು ವರ್ಷಕ್ಕಾಗಿ 552,92,23000 ರೂಪಾಯಿಗಳ ನೀಡಿಕೆ
3. ಧನವಿನಿಯೋಗ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2001-2002 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನೂ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ (1) (ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(2001ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:21 ಕಡತ ಸಂಖ್ಯೆ: ಸಂವ್ಯಶಾಇ 37 ಶಾಸನ 2001)

## 2001ರ ಕರ್ನಾಟಕ ಅಧಿನಿಯಮ ಸಂಖ್ಯೆ 18

*(2001 ರ ಆಗಸ್ಟ್ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ಅಧಿನಿಯಮ, 2001

*(2001 ರ ಆಗಸ್ಟ್ ಎಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

2001-2002 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ಅಧಿನಿಯಮ.

2001-2002 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ಅಧಿನಿಯಮ, 2001 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2001-2002 ನೇ ಹಣಕಾಸು ವರ್ಷಕ್ಕಾಗಿ 552,92,23,000 ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2001-2002ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮೊತ್ತದಲ್ಲಿ ಐದು ನೂರ ಐವತ್ತೆರಡು ಕೋಟಿ ತೊಂಬತ್ತೆರಡು ಲಕ್ಷದ ಇಪ್ಪತ್ತಮೂರು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ.-** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ:1516 ದಿನಾಂಕ: 9.8.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 37 ಶಾಸನ 2001

## ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ಮೊಬಲಗು ಲಕ್ಷ ರೂ.ಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು | | ಒಟ್ಟು |
|---|---|---|---|---|---|
| | | | ಸಂಚಿತ ನಿಧಿಯಿಂದ ಪ್ರಭೃತವಾದುದು | ವಿಧಾನಸಭೆಯಿಂದ ಪುರಸ್ಕೃತವಾದುದು | |
| 1 | 2 | | 3 | 4 | 5 |
| 1 | ಕೃಷಿ (ಬಯಲುಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ) | ರಾಜಸ್ವ | | 69.74 | 69.74 |
| 2 | ತೋಟಗಾರಿಕೆ | ರಾಜಸ್ವ | | 1860.28 | 1860.28 |
| | | ಬಂಡವಾಳ | | 40.00 | 40.00 |
| 3 | ಪಶು ಸಂಗೋಪನೆ | ರಾಜಸ್ವ | | 856.00 | 856.00 |
| 4 | ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ | ರಾಜಸ್ವ | | 110.00 | 110.00 |
| | | ಬಂಡವಾಳ | | 10.00 | 10.00 |
| 5 | ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ ಬಿಟ್ಟು) | ಬಂಡವಾಳ | | 1273.00 | 1273.00 |
| 6 | ಗಣಿ ಮತ್ತು ಭೂವಿಜ್ಞಾನ | ಬಂಡವಾಳ | | 279.00 | 279.00 |
| 8 | ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು | ರಾಜಸ್ವ | | 630.00 | 630.00 |
| | | ಬಂಡವಾಳ | | 288.00 | 288.00 |
| 9 | ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | | 648.28 | 648.28 |
| | | ಬಂಡವಾಳ | | 40.00 | 40.00 |
| 10 | ಪ್ರಾಥಮಿಕ, ಪ್ರೌಢ ಮತ್ತು ವೃತ್ತಿಪರ ಶಿಕ್ಷಣ | ರಾಜಸ್ವ | | 641.51 | 641.51 |

| 1 | 2 | | 3 | 4 | 5 |
|---|---|---|---|---|---|
| 12 | ಯುವಜನ ಸೇವೆಗಳು | ರಾಜಸ್ವ | | 175.94 | 175.94 |
| 13 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ | | 537.85 | 537.85 |
| | | ಬಂಡವಾಳ | | 100.00 | 100.00 |
| 14 | ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು | ರಾಜಸ್ವ | | 3.00 | 3.00 |
| 21 | ಬೆಂಗಳೂರು ಅಭಿವೃದ್ಧಿ ಯೋಜನೆಗಳು | ಬಂಡವಾಳ | | 1000.00 | 1000.00 |
| 23 | ಸಚಿವಾಲಯ | ರಾಜಸ್ವ | | 49.80 | 49.80 |
| 24 | ಸಾಮಾನ್ಯ ಆಡಳಿತ | ರಾಜಸ್ವ | 5.98 | 19.70 | 25.68 |
| 26 | ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ | ರಾಜಸ್ವ | | 1003.50 | 1003.50 |
| 27 | ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ) | ರಾಜಸ್ವ | | 15.00 | 15.00 |
| 28 | ಬಂದೀಖಾನೆ, ಗೃಹ ರಕ್ಷಣಾ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ | ರಾಜಸ್ವ | | 2.32 | 2.32 |
| 29 | ಆಹಾರ ಮತ್ತು ನಾಗರೀಕ ಸರಬರಾಜು | ಬಂಡವಾಳ | | 808.03 | 808.03 |
| 30 | ಅರಣ್ಯ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ | ರಾಜಸ್ವ | | 2699.00 | 2699.00 |
| 32 | ಒಳಾಡಳಿತ (ಪೊಲೀಸ್ ಜಾಗೃತ ದಳ ಹೊರತುಪಡಿಸಿ) | ರಾಜಸ್ವ | | 3492.00 | 3492.00 |
| 33 | ವಾರ್ತಾ ಮತ್ತು ಪ್ರಚಾರ | ರಾಜಸ್ವ | | 112.25 | 112.25 |
| | | ಬಂಡವಾಳ | | 2.60 | 2.60 |
| 36 | ವಸತಿ | ರಾಜಸ್ವ | | 200.00 | 200.00 |
| 38 | ಭಾರಿ ಮತ್ತು ಮಧ್ಯಮ ನೀರಾವರಿ | ಬಂಡವಾಳ | | 4666.11 | 4666.11 |
| 39 | ಸಣ್ಣ ನೀರಾವರಿ (ಅಂತರ್ಜಲ ಹೊರತುಪಡಿಸಿ) | ರಾಜಸ್ವ | | 5.00 | 5.00 |
| | | ಬಂಡವಾಳ | | 1050.00 | 1050.00 |
| 40 | ರಾಜ್ಯ ಶಾಸಕಾಂಗ | ರಾಜಸ್ವ | 2.39 | 728.13 | 730.52 |

| 1 | 2 | | 3 | 4 | 5 |
|---|---|---|---|---|---|
| 41 | ನ್ಯಾಯ ಪರಿಪಾಲನೆ | ರಾಜಸ್ವ | | 100.18 | 100.18 |
| 42 | ಕಂದಾಯ (ವಕ್ಫ್, ಹಜ್ ಮತ್ತು ಮುಜರಾಯಿ ಹೊರತುಪಡಿಸಿ) | ರಾಜಸ್ವ | | 106.30 | 106.30 |
| | | ಬಂಡವಾಳ | | 7.58 | 7.58 |
| 44 | ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ) | ಬಂಡವಾಳ | | 16786.15 | 16786.15 |
| 45 | ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) | ರಾಜಸ್ವ | | 2230.00 | 2230.00 |
| | | ಬಂಡವಾಳ | | 1000.00 | 1000.00 |
| 46 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ | ರಾಜಸ್ವ | | 5814.00 | 5814.00 |
| 47 | ಕಾರ್ಮಿಕ ಮತ್ತು ವಕ್ಫ್ | ರಾಜಸ್ವ | | 801.27 | 801.27 |
| | | ಬಂಡವಾಳ | | 265.00 | 265.00 |
| 48 | ಸಮಾಜ ಕಲ್ಯಾಣ | ರಾಜಸ್ವ | | 823.88 | 823.88 |
| 49 | ಮಹಿಳಾ ಮತ್ತು ಶಿಶು ಕಲ್ಯಾಣ | ರಾಜಸ್ವ | | 56.37 | 56.37 |
| | | ಬಂಡವಾಳ | | 97.00 | 97.00 |
| 50 | ವೈದ್ಯಕೀಯ ಶಿಕ್ಷಣ | ರಾಜಸ್ವ | | 782.83 | 782.83 |
| 51 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ರಾಜಸ್ವ | | 596.06 | 596.06 |
| | | ಬಂಡವಾಳ | | 70.00 | 70.00 |
| 53 | ಸಕ್ಕರೆ | ಬಂಡವಾಳ | | 1614.79 | 1614.79 |
| 54 | ಬಡ್ಡಿ ಸಂದಾಯ | ರಾಜಸ್ವ | | 293.65 | 293.65 |
| 55 | ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಮುಂಗಡಗಳು ಹಾಗೂ ರಾಜ್ಯ ತೀರುವಿಕೆಗಳು | ಬಂಡವಾಳ | | 272.76 | 272.76 |
| 59 | ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ | ರಾಜಸ್ವ | | 150.00 | 150.00 |
| | **ಒಟ್ಟು** | **ರಾಜಸ್ವ** | **8.37** | **25613.84** | **25622.21** |
| | | **ಬಂಡವಾಳ** | **272.76** | **29397.26** | **29670.02** |
| | **ಒಟ್ಟು** | | **281.13** | **55011.10** | **55292.23** |